ಶ್ರೀ ಕೆ. ಹೆಚ್. ಪಾಟೀಲ್.—ಇದು ಯೋಗ್ಯ ಎಂದು ಕಂಡು ಬಂದರೆ, ನಿಮ್ಮ ಹೃದಯಕ್ಕೆ ಹಾಗೂ ಸರ್ಕಾರಕ್ಕೆ ಯೋಗ್ಯ ಎಂದೂ ಕಂಡು ಬಂದರೆ, ನೀವು ಪ್ರಯತ್ನ ಮಾಡಬಹುದಲ್ಲಾ ?

ಶ್ರೀ ಹೆಚ್. ಡಿ. ದೇವೇಗೌಡ.—ಯೋಗ್ಯವಾದ ಪ್ರಾಜೆಕ್ಟ್ ಎಂದೂ ಹೇಳುವುದರಲ್ಲಿ ತಕರಾರು ಏನೂ ಇಲ್ಲ. ಆದರೆ ಮುಳುಗಡೆಯಾಗುತ್ತದೆ ಎಂದೂ ದೊಡ್ಡ ಗಲಾಟೆಯಾಗಿ. ಹಿಂದಿನ ಮುಖ್ಯಮಂತ್ರಿಗಳು ಕೊಡಗಿನವರೇ ಆದರೂ ತಡೆಹಿಡಿಯಿರಿ ಎಂದೂ ಹೇಳಿದ್ದಾರೆ. ಇದರ ಬಗ್ಗೆ ಮರು ಚಿಂತನೆ ಮಾಡುತ್ತೇನೆ.

ಶ್ರೀಮತಿ ಸುಮಾ ವಸಂತ.—ಇಲ್ಲಿ ಮಳೆ ನೀರನ್ನೇ ನಂಬಿಕೊಂಡು ವ್ಯವಸಾಯ ಮಾಡಬೇಕಾಗಿದೆ. ಕಾವೇರಿ ನದಿ ಹರಿಯುತ್ತಿದ್ದರೂ ಪ್ರಯೋಜನವಿಲ್ಲ. ತಾವು ನೀರಾವರಿಗೋಸ್ಕರ ಬೇಕಾದಷ್ಟು ಹಣ ಖರ್ಚು ಮಾಡುತ್ತಿದ್ದೀರಿ. ಇಲ್ಲಿ ಒಂದು ಲಿಫ್ಟ್ ಇರಿಗೇಷನ್ ಒದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ತಾವು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುತ್ತಿದ್ದೀರಿ, ಎಲ್ಲಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಿದರೆ, ಆದರ ಬಗ್ಗೆ ಪ್ರಯತ್ನ ಮಾಡುತ್ತೇನೆ.

ಮುಚ್ಚಲಾದ ಶಾಲೆಗಳು ಹಾಗೂ ಮಹಾವಿದ್ಯಾಲಯಗಳು

೩೪೮. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಸರ್ಕಾರಿ ಹಾಗೂ ಖಾಸಗಿ ಪ್ರೌಢಶಾಲೆಗಳು ಹಾಗೂ ಪದವಿಪೂರ್ವ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಕೆಲವು ಶಾಲೆಗಳನ್ನು ಮುಚ್ಚಲು ಸರ್ಕಾರದವರು ಆದೇಶ ನೀಡಿರುವುದು ನಿಜವೇ ? ಹಾಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು). ಪ್ರಾಥಮಿಕ, ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳ ಮಾಹಿತಿಯನ್ನೊದಗಿಸುವುದು ?

ಇ) ಸದರಿ ಶಾಲಾ ಕಾಲೇಜುಗಳನ್ನು ಮುಚ್ಚಲು ಆದೇಶ ನೀಡಿರುವುದಕ್ಕೆ ಕಾರಣಗಳೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಸಚಿವರು).—

ಅ)	ಸರ್ಕಾರ	ಖಾಸಗಿ
ಪ್ರೌಢ ಶಾಲೆಗಳು	೧೪೬೬	೨೬೫೭
ಪದವಿಪೂರ್ವ ಕಾಲೇಜುಗಳು	೩೮೧	೪೬೦

ಆ) ಮುಚ್ಚಲೆಂದು ಸರ್ಕಾರಿ ಆದೇಶ ಹೊರಡಿಸಿರುವ ಖಾಸಗಿ ಪ್ರಾಥಮಿಕ ಪ್ರೌಢಶಾಲೆಯಾವುವೂ ಇಲ್ಲ. ಆದರೆ ಇದುವರೆವಿಗೂ ಎರಡು ಸರ್ಕಾರಿ ಪದವಿಪೂರ್ವ ಕಾಲೇಜನ್ನು ಮುಚ್ಚಲು ಸರ್ಕಾರ ಆದೇಶ ಹೊರಡಿಸಿದೆ.

೧ ಸರ್ಕಾರಿ ಪದವಿಪೂರ್ವ ಕಾಲೇಜು ಇಲವಾಲ ಮೈಸೂರು ಜಿಲ್ಲೆ

೨ ಸರ್ಕಾರಿ ಪದವಿಪೂರ್ವ ಕಾಲೇಜು ಕುಂದೂರು ಮಠ ಹಾಸನ ಜಿಲ್ಲೆ

ಇ) ಸದರಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೦ಕ್ಕಿಂತ ಕಡಿಮೆ ಇರುವುದರಿಂದ ಅವುಗಳನ್ನು ಸ್ಥಳಾಂತರಿಸಲಾಗಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಇವರಿಗೆ ಸರಿಯಾದ ಮಾಹಿತಿ ದೊರೆತಿರಲಿಕ್ಕಿಲ್ಲ. ನಾನು ಇತ್ತೀಚೆಗೆ ಟೂರ್ ಹೋಗಿದ್ದಾಗ, ರಾಯಚೂರು ಡಿಸ್ಟ್ರಿಕ್ಟ್ ದೇವದುರ್ಗಕ್ಕೆ ಹೋಗಿದ್ದೆ. ಅಲ್ಲಿ ಇದ್ದದ್ದು ಒಂದೇಒಂದು ಜೂನಿಯರ್ ಕಾಲೇಜ್, ಅದನ್ನು ಮುಚ್ಚಿದ್ದಾರೆ.

ವಿತಕ್ಕೆ ಮಂಚ್ಚಿದ್ದೀರಿ, ಅಲ್ಲಿಯ ವಂಕ್ಕಳು ವಿದ್ಯಾಭ್ಯಾಸ ಮಾಡಬಾರದೇ ? ಇದರ ಬಗ್ಗೆ ನಾನು ಚೀಫ್ ಮಿನಿಸ್ಟರ್‌ಗೂ ಕಾಗದ ಬರೆದಿರುತ್ತೇನೆ. ನಿವಂಗೆ ಮಾಹಿತಿ ದೊರಕದೇ ಇದ್ದರೆ ತರಿಸಿಕೊಂಡು ಅಲ್ಲಿನ ವಂಕ್ಕಳಿಗೆ ಅನುಕೂಲ ಮಾಡಿಕೊಡಿ. ಮಾಹಿತಿ ಇಲ್ಲ ಎಂದು ಕಾಣುತ್ತದೆ, ಅದಕ್ಕೆ ಬೇರೆ ಕಡೆ ಎಲ್ಲೂ ಮುಚ್ಚಿಲ್ಲ ಎಂದು ಹೇಳಿದ್ದೀರಿ. ಅಲ್ಲಿಗೆ ನಾನು ಹೋಗಿದ್ದಾಗ ಎಲ್ಲಾ ಹುಡುಗರೂ ಬಂದು ನನ್ನನ್ನು ಮಂತ್ರಿಕೊಂಡರು. ದಯವಿಟ್ಟು ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಅದನ್ನು ಪ್ರಾರಂಭಿಸುವುದಕ್ಕೆ ಕ್ರಮ ತೆಗೆದುಕೊಳ್ಳಿ. ಅಲ್ಲಿ ಇರುವುದು ಒಂದೇ ಒಂದು ಕಾಲೇಜು.

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೇ, ಜೂನಿಯರ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೧೦ ಕ್ಕಿಂತ ಕಡಿಮೆ ಇದ್ದರೆ ಮುಚ್ಚಬೇಕೆಂದು ತೀರ್ಮಾನ ತೆಗೆದು ಕೊಂಡಿದ್ದೇವೆ. ೧೦ ಕ್ಕಿಂತ ಹೆಚ್ಚು ಸಂಖ್ಯೆ ಇದ್ದೂ ಅದನ್ನು ಮುಚ್ಚಿದ್ದರೆ, ಅದರ ಬಗ್ಗೆ ಮಾಹಿತಿ ತರಿಸಿಕೊಂಡು ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನನ್ನ ಕ್ಷೇತ್ರದ ಕಿಬ್ಬನಹಳ್ಳಿ ಹೋಬಳಿ.....

ಅಧ್ಯಕ್ಷರು.—ಕ್ವೆಶ್ಚನ್ ಅವರ್ ಮುಗಿದು ಹೋಯಿತು. ನಾನು ಅವಕಾಶ ಕೊಡುವುದಿಲ್ಲ. I have not permitted you. It will not be recorded.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೫೫

ಶ್ರೀ ಪಿ. ಎಂ. ಚಿಕ್ಕಬೋರಯ್ಯ.—ಮಾನ್ಯ ಸದಸ್ಯರ ಗೈರುಹಾಜರಿ

ಶಹಾಪುರ ಉಪ ಕಾಲುವೆಯ ಬಗ್ಗೆ

೬೪೭. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್).—ಮಾನ್ಯ ಲೋಕೋಪಯೋಗಿ ಕಾಡಾ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಹಾಪುರ ಉಪ ಕಾಲುವೆಯಲ್ಲಿ ಬಿರುಕು ಬಿಟ್ಟು ಒಡೆದಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಈ ಬಿರುಕಿನಿಂದ ಆದ ಒಟ್ಟು ಹಾನಿ ಎಷ್ಟು ?

ಇ) ಈ ಕಾಮಗಾರಿಯನ್ನು ಗುತ್ತಿಗೆದಾರರಿಂದ ಮಾಡಿಸಿಕೊಳ್ಳಲಾಗಿದೆಯೆ, ಅಥವಾ ಇಲಾಖಾ ವತಿಯಿಂದ ಮಾಡಲಾಗಿದೆಯೇ ?

ಈ) ಕಾಮಗಾರಿಯನ್ನು ಇಲಾಖಾ ವತಿಯಿಂದ ಮಾಡಿದ್ದಾರೆ, ಈ ಕಳಪೆ ಕೆಲಸಕ್ಕೆ ಜವಾಬ್ದಾರರಾಗಿರುವ ಅಧಿಕಾರಿಗಳು ಯಾರು, ಮತ್ತು ಅವರ ವಿರುದ್ಧ ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಸಚಿವರು).—

ಅ) ಹೌದು.

ಆ) ಒಡೆದ ಬಾಗವನ್ನು ಮುಚ್ಚಲು ತಗಲಿದ ವೆಚ್ಚ ೨೭,೨೪೮ ರೂ.ಗಳು

ಇ) ಈ ಭಾಗದ ಕಾಲುವೆ ಕೆಲಸವನ್ನು ಗುತ್ತಿಗೆದಾರರ ಮುಖಾಂತರ ಮಾಡಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಆಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಬರತಕ್ಕಂಥ ಶಹಾಪುರ ಬ್ರಾಂಚ್ ಕೆನಾಲ್ ಏನಿದೆ ಅದು ಬ್ರೀಚ್‌ಆಗಿ ಸುಮಾರು ೨೭ ಸಾವಿರದ ೨೪೮ ರೂಪಾಯಿಗಳು ರಿಪೇರಿಗೆ ಖರ್ಚಾಯಿತು. ಆದರೆ ಬ್ರೀಚ್ ಆಗಿರುವುದರಿಂದ ನೂರಾರು ಜನ ರೈತರ ಬೆಳೆ ಹಾಳಾಯಿತು. ಬ್ರೀಚ್ ಆದಮೇಲೆ ಕೆಳಗಡೆ ಇದ್ದ ಭೂಮಿಯನ್ನು ಹಾಗೂ ಬೆಳೆಯನ್ನು ನೀರು ಕೊಚ್ಚಿಕೊಂಡು ಹೋಗಿದೆ. ಇದಕ್ಕೆ ರೈತರಿಗೆ ಏನಾದರೂ ಕಂಪೆನ್‌ಸೇಷನ್ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೀರಾ ? ತಪ್ಪು ಅಧಿಕಾರಿಗಳನ್ನು ಕಳುಹಿಸಿ ಎಷ್ಟು ರೈತರು ಕೆನಾಲ್ ಬ್ರೀಚ್‌ನಿಂದ ಹಾನಿಗೆ ಒಳಗಾಗಿದ್ದಾರೆ ಎಂಬುದನ್ನು ಪರಿಶೀಲಿಸುತ್ತೀರಾ ? ದಿಸ್ ಈಸ್ ದಿ ಬಿಗ್ಗೆಸ್ಟ್ ಕೆನಾಲ್. ಈ ಶಹಾಪುರ ಬ್ರಾಂಚ್ ಕೆನಾಲ್ ಏನಿದೆ ಇದೇ ಮೇನ್ ಕೆನಾಲ್. ಇದು ಬ್ರೀಚ್ ಆಗಿದೆ. ಇದರಿಂದ ನೂರಾರು